> ಲೇಖಕರು ಅಜರಾಮರರು ಅನ್ನುವುದರ ಬಗ್ಗೆ ನಂಬಿಕೆಯಿಲ್ಲ. ಇನ್ನೂರು ವರ್ಷಗಳ ಕೆಳಗೆ ಬರೆದ ಪುಸ್ತಕಗಳಲ್ಲಿ ಕೆಲವನ್ನು ಮಾತ್ರ ಓದುತ್ತಿದ್ದೇವೆ. ಇಂದು ಬರೆದ ಪುಸ್ತಕಗಳು ನೂರು ವರ್ಷಗಳ ಬಳಿಕ ಮರೆತೇಹೋಗಬಹುದು. ಇನ್ನೂರು ವರ್ಷಗಳ ಬಳಿಕ ಬಹುಶಃ ಇಂದು ಬರೆದಿರುವ ಐದು ಪುಸ್ತಕಗಳನ್ನು ಮಾತ್ರ ಓದಬಹುದು. ಆ ಐದರಲ್ಲಿ ಒಂದು ನನ್ನ ಪುಸ್ತಕ ಎನ್ನುವ ನಂಬಿಕೆಯಿದೆ.

ಗುರುತಿಸಿಕೊಳ್ಳಬೇಕಿತ್ತು. ಆಗ ಆ ಸಾಹಿತ್ಯ ಸಂಪತ್ತನ್ನು ಬಳಸಿಕೊಳ್ಳಬಹುದಿತ್ತು. ಟರ್ಕಿಗೆ ಬಹಳ ಶ್ರೀಮಂತವಾದ ಸಾಹಿತ್ಯ ಪರಂಪರೆಯಿದೆ. ಸಾಮಾಜಿಕ ಬದ್ಧತೆಯಿದ್ದ ಬರಹಗಾರರು ಹೊಸತನ್ನು ಕೊಡಲಾಗದೆ ಆ ಸಾಹಿತ್ಯ ಸೊರಗುವಂತೆ ಮಾಡಿದ್ದಾರೆ.

ಹಲವಾರು ಕತೆಗಳು ಚೀನಾ, ಭಾರತ, ಪರ್ಷಿಯಾದ ಜಾನಪದ ಕತೆಗಳ ಮೌಖಿಕ ಸಂಪ್ರದಾಯದಲ್ಲಿ ಪುನರಾವರ್ತನೆಯಾಗಿವೆ. ಅವುಗಳನ್ನು ಸಮಕಾಲಿನ ಇಸ್ತಾಂಬುಲ್‌ನಲ್ಲಿ ಬಳಸಲು ನಿರ್ಧರಿಸಿದೆ. ಎಲ್ಲವನ್ನೂ ಒಂದು ಕಡೆ ಸೇರಿಸಿದ್ದು ದಾದಿಸಂ ಕೊಲಾಜ್ ರೀತಿಯಲ್ಲೊಂದು ಪ್ರಯೋಗ. 'ದ ಬ್ಲಾಕ್ ಬುಕ್' ಈ ರೀತಿಯ ಗುಣವನ್ನು ಹೊಂದಿದೆ. ಕೆಲವೊಮ್ಮೆ ಈ ಎಲ್ಲ ಸಂಪನ್ಮೂಲಗಳು ಒಂದಾಗಿ ಹೊಸತೇನೋ ಹುಟ್ಟುತ್ತದೆ. ಹಾಗಾಗಿ ಈ ಎಲ್ಲ ಕತೆಗಳನ್ನು 'ಇಸ್ತಾಂಬುಲ್'ನಲ್ಲಿ ಸೇರಿಸಿ ಅದಕ್ಕೊಂದು ಪತ್ತೆದಾರಿ ಅಂಶವನ್ನು ಸೇರಿಸಿದೆ. ಅದೇ 'ದ ಬ್ಲಾಕ್ ಬುಕ್'. ನಾನೊಬ್ಬ ಗಂಭೀರ ಪ್ರಯೋಗಶೀಲ ಬರಹಗಾರನಾಗಬೇಕು ಎನ್ನುವುದು ನನ್ನಾಸೆಯಾಗಿತ್ತು. ಟರ್ಕಿಯ ಸಮಸ್ಯೆಗಳ ಕುರಿತು ಕಾಮೆಂಟರಿ ಕೊಡುವುದು ಬೇಕಿರಲಿಲ್ಲ. ಹಾಗಾಗಿ ಬೇರೆ ಏನನ್ನಾದರೂ ಪ್ರಯತ್ನಿಸಬೇಕಿತ್ತು.

◆ **'ದ ಬ್ಲಾಕ್ ಬುಕ್' ಮೊದಲಿನ ಕತೆಗೆ ಹೋಗೋಣ. 'ದ ವೈಟ್ ಕಾಸ್ಟಲ್' ಬರೆಯಲು ಪ್ರೇರಣೆ ಏನು? ವ್ಯಕ್ತಿ ಮತ್ತೊಬ್ಬನಂತಾಗುವ ವಸ್ತು ಮೊದಲಿಗೆ ಕಾಣಿಸಿಕೊಂಡಿದ್ದು ಈ ಕಾದಂಬರಿಯಲ್ಲಿ. ಅನಂತರ ಎಲ್ಲದರಲ್ಲಿ ಇದು ಮುಂದುವರೆದಿದೆ. ಈ ವಸ್ತು ಯಾಕೆ ನಿಮ್ಮ ಕಾದಂಬರಿಗಳಲ್ಲಿ ಮತ್ತೆ ಮತ್ತೆ ಬರುತ್ತದೆ?**

ಇದು ಬಹಳ ವೈಯುಕ್ತಿಕ ವಿಷಯ. ನನಗಿಂತ ಒಂದೂವರೆ ವರ್ಷ ದೊಡ್ಡವನಾದ ನನ್ನಣ್ಣ ಒಬ್ಬ ಇದ್ದಾನೆ. ಅವನು ನನ್ನ ಪ್ರತಿಸ್ಪರ್ಧಿ. ಅವನೊಂಥರ ಫ್ರಾಯ್ಡ್ ಹೇಳುವ ತರಹದಲ್ಲಿ ಅಪ್ಪನ ಹಾಗೆ. ನಮ್ಮ ನಡುವೆ ಅಣ್ಣತಮ್ಮಂದಿರಲ್ಲಿರುವ ಸ್ಪರ್ಧೆಗಳು, ಮೇಲಾಟಗಳು ಇವೆ. ಒಂಥರಾ ಬಹಳ ಸಂಕೀರ್ಣವಾದ ಸಂಬಂಧ. ಇದರ ಬಗ್ಗೆ 'ಇಸ್ತಾಂಬುಲ್'ನಲ್ಲಿ ಹೆಚ್ಚು ಬರೆದಿದ್ದೇನೆ. ನಾನು ಟಿಪಿಕಲ್ ಟರ್ಕಿ ಹುಡುಗ. ಸ್ನೂಕರ್ ಚೆನ್ನಾಗಿ ಆಡುತ್ತೇನೆ. ಎಲ್ಲ ರೀತಿಯ ಆಟಗಳು ಸ್ಪರ್ಧೆಗಳು ನನಗಿಷ್ಟ. ಅವನು ಶಾಲೆಯಲ್ಲಿ ನನಗಿಂತ ಉತ್ತಮ. ನನಗೆ ಅವನ ಬಗ್ಗೆ, ಅವನಿಗೆ ನನ್ನ ಬಗ್ಗೆ ಹೊಟ್ಟೆಕಿಚ್ಚು. ಅವನು ಹೆಚ್ಚು ಜವಾಬ್ದಾರಿಯಿರುವ ವ್ಯಕ್ತಿ. ದೊಡ್ಡವರು ಅವನ ಬಗ್ಗೆಯೇ ಹೆಚ್ಚು ಮಾತಾಡುತ್ತಿದ್ದರು. ನಾನು ಆಟ ಆಡುವುದಕ್ಕೆ ಗಮನಕೊಟ್ಟರೆ ಅವನು ನಿಯಮಗಳಿಗೆ ಗಮನ ಕೊಡುತ್ತಿದ್ದ. ಯಾವಾಗಲೂ ನಾವು ಪ್ರತಿಸ್ಪರ್ಧಿಗಳು. ನನಗೆ ಅವನಂತಾಗಬೇಕು ಅಂತಾಸೆ ಇತ್ತು. ಅವನು ನನ್ನ ಮಾದರಿ ವ್ಯಕ್ತಿಯಾಗಿದ್ದ. ಅಸೂಯೆ, ಹೊಟ್ಟೆಕಿಚ್ಚು ಇವು ನನ್ನ ಹೃದಯಕ್ಕೆ ಬಹಳ ಹತ್ತಿರವಾದ ವಸ್ತುಗಳು. ನನ್ನಣ್ಣನ ಶಕ್ತಿ ಅಥವಾ ಅವನ ಯಶಸ್ಸು ನನ್ನನ್ನೆಷ್ಟು ಪ್ರಭಾವಿಸಿರಬಹುದು ಅಂತ ಯಾವಾಗಲೂ ಚಿಂತಿಸುತ್ತೇನೆ.